ತಗುಲಿ ಭಿಕ್ಷುಕನ ದೇಹ ಕೆಳಗೆ ಕುಸಿಯಿತು. ಅದನ್ನು ಕಂಡು ಅವರು ಯಾವಾಗಲೂ ಭಿಕ್ಷೆ ಬೇಡಲು ಬರುವ ಭಿಕ್ಷುಕ ಇವನು. ನಮ್ಮ ಅಚಾತುರ್ಯದಿಂದ ಸತ್ತಿದ್ದಾನೆ. ವಿಷಯ ಬಯಲಾದರೆ ಮರಣ ದಂಡನೆಯಾಗುತ್ತದೆ ಎಂದು  ಭಯಗೊಂಡರು. ಮೆಲ್ಲನೆ ಭಿಕ್ಷುಕನ ದೇಹವನ್ನು ಹೊತ್ತುಕೊಂಡು ಹೋಗಿ ಬೀದಿಯಲ್ಲಿದ್ದ ದೀಪದ ಕಂಬಕ್ಕೆ ಆಧರಿಸುವಂತೆ ನಿಲ್ಲಿಸಿ ಬಂದರು. ರಾತ್ರಿ ಕುಡುಕನೊಬ್ಬ ಅಮಲೇರಿ ಬಂದು ಈ ದೇಹಕ್ಕೆ ಢಿಕ್ಕಿ ಹೊಡೆದ. ದೇಹ ಕೆಳಗೆ ಬಿದ್ದಿತು, ಅದರ ಮೇಲೆ ಅವನೂ ಬಿದ್ದು ಬೆಳಗಾಗುವವರೆಗೂ ಹಾಗೆಯೇ ಮಲಗಿಕೊಂಡಿದ್ದ.

ಬೆಳಗಾಯಿತು. ಸುಲ್ತಾನನ ಕಾವಲು ಪಡೆಯವರು ಬಂದರು. ಸತ್ತುಹೋಗಿರುವ ಭಿಕ್ಷುಕನ ದೇಹದ ಮೇಲೆ ಬಿದ್ದುಕೊಂಡಿರುವ ಕುಡುಕನನ್ನು ನೋಡಿದರು. ಅವನೇ ಕೊಲೆ ಮಾಡಿದವನೆಂದು ನಿರ್ಧರಿಸಿ ಸುಲ್ತಾನನ ಬಳಿಗೆ ಎಳೆದುಕೊಂಡು ಹೋದರು. ಕೊಲೆ ಮಾಡಿದವನಿಗೆ ಕೊಲೆಯೇ ಶಿಕ್ಷೆ. ಸುಲ್ತಾನನು ಕುಡುಕನ ಕೊರಳಿಗೆ ನೇಣು ಬಿಗಿದು ಕೊಲ್ಲಲು ಆಜ್ಞಾಪಿಸಿದ. ಭಟರು ಅವನನ್ನು ವಧಾಸ್ಥಾನಕ್ಕೆ ಎಳೆದುಕೊಂಡು ಹೋಗಿ ಕುತ್ತಿಗೆಗೆ ನೇಣು ಹಾಕಲು ಮುಂದಾದರು. ಆಗ ಈ ವಿಷಯ ಧನಿಕನ ಮನೆಯ ಸೇವಕರಿಗೆ ತಿಳಿಯಿತು. ಅವರು ಅಲ್ಲಿಗೆ ಓಡಿಬಂದರು. 'ಆಹಾರ ಸಾಮಗ್ರಿಯ ಬಳಿ ನಿಂತಿದ್ದ ಇವನನ್ನು ಕಾಣದೆ ಕೆಳಗೆ ಬೀಳುವಂತೆ ಮಾಡಿ ಸಾವಿಗೆ ಕಾರಣರಾದವರು ನಾವು. ಇವನನ್ನು ಬಿಟ್ಟು ನಮಗೆ ನೇಣು ಹಾಕಿ' ಎಂದು ನಿಜ ವಿಷಯ ತಿಳಿಸಿದರು. ಭಟರು ಕುಡುಕನ ಬದಲಿಗೆ ಅವರನ್ನು ನೇಣುಗಂಬಕ್ಕೇರಿಸಲು ಮುಂದಾದರು.

ಈ ಸಂಗತಿ ಹಕೀಮನಿಗೆ ತಿಳಿಯಿತು. ತಾನು ಭಿಕ್ಷುಕನ ಸಾವಿಗೆ ಕಾರಣನಾಗಿರುವಾಗ ವೃಥಾ  ಧನಿಕನ ಸೇವಕರು ಸಾಯುವುದು ಅವನಿಗೆ ಇಷ್ಟವಾಗಲಿಲ್ಲ. ನೇಣುಗಂಬದ ಬಳಿಗೆ ಧಾವಿಸಿದ. 'ಭಿಕ್ಷುಕ ಸಾಯಲು ಕಾರಣ ನಾನು. ನನ್ನನ್ನು ಕೊಂದುಬಿಡಿ' ಎಂದು ಹೇಳಿದ. ಭಟರು ಅವನಿಗೆ ನೇಣು ಹಾಕಲು ಸಿದ್ಧರಾದರು. ಇದು ದರ್ಜಿಗೆ ತಿಳಿಯಿತು. ಭಿಕ್ಷುಕ ಸತ್ತಿರುವುದು ತನ್ನ ಮನೆಯ ಊಟದಲ್ಲಿ ಬಂದ ಮೀನಿನ ಮುಳ್ಳಿನಿಂದಾಗಿ. ಇದಕ್ಕೆ ಶಿಕ್ಷೆಯಾಗಬೇಕಾಗಿರುವುದು ತನಗೆ ಎಂದು ನಿರ್ಧರಿಸಿ ಹೆಂಡತಿಯೊಂದಿಗೆ ಅಲ್ಲಿಗೆ ಓಡಿಬಂದ. ನಡೆದ ವಿಷಯ ಹೇಳಿ ತಮಗಿಬ್ಬರಿಗೂ ಶಿಕ್ಷೆ ವಿಧಿಸಲು ಪ್ರಾರ್ಥಿಸಿದ.

ಭಟರು ದರ್ಜಿ ದಂಪತಿಗೆ ಶಿಕ್ಷೆ ವಿಧಿಸಲು ತಯಾರಾದರು. ಆಗ ಒಬ್ಬ ಕ್ಷೌರಿಕ ಅಲ್ಲಿಗೆ ಬಂದ. ಭಿಕ್ಷುಕನ ದೇಹವನ್ನು ನೋಡಿದ. 'ನೇಣು ಹಾಕಲು ಅವಸರಿಸಬೇಡಿ, ಸ್ವಲ್ಪ ನಿಲ್ಲಿ' ಎಂದು ಹೇಳಿದ. ಭಿಕ್ಷುಕನ ದೇಹದ ಮೂಗಿನ ಬಳಿ ಬೆರಳಿರಿಸಿ ಪರೀಕ್ಷಿಸಿದ. ಬಳಿಕ ತನ್ನ ಚೀಲದಿಂದ ಒಂದು ಮುಲಾಮನ್ನು ತೆಗೆದು ಅವನ ಗಂಟಲಿಗೆ ಹಚ್ಚಿದ. ಮರುಕ್ಷಣವೇ ಪವಾಡ ಎಂಬಂತೆ ಸತ್ತಿದ್ದನೆಂದುಕೊಂಡಿದ್ದ ಭಿಕ್ಷುಕ ಜೋರಾಗಿ ಕೆಮ್ಮಿದ. ಅವನ ಗಂಟಲಿನಲ್ಲಿ ಸಿಲುಕಿಕೊಂಡಿದ್ದ ಮೀನಿನ ಮೂಳೆ ತಟಕ್ಕನೆ ಬಾಯಿಯ ಮೂಲಕ ಹೊರಗೆ ಬಂದಿತು. ಭಿಕ್ಷುಕ ಕಣ್ತೆರೆದ. ಎದ್ದು ಕುಳಿತ. 'ಏನಾಯಿತು, ನಾನು ಇಲ್ಲಿಗೆ ಹೇಗೆ ಬಂದೆ?' ಎಂದು ಕೇಳಿದ.

ಭಿಕ್ಷುಕ ಸಾಯದ ಕಾರಣ ಯಾರಿಗೂ ಶಿಕ್ಷೆಯಾಗಲಿಲ್ಲ. ಈ ವಿಷಯ ತಿಳಿದ ಸುಲ್ತಾನ, 'ಎಷ್ಟು ಒಳ್ಳೆಯ ಕತೆ! ಇದನ್ನು ಹೇಳಿದ ಭಿಕ್ಷುಕನಿಗೆ ಅವನ ತೂಕದಷ್ಟೇ ಚಿನ್ನದ ನಾಣ್ಯಗಳನ್ನು ಕೊಟ್ಟು ಕಳುಹಿಸಿ. ಅವನನ್ನು ಸಾವಿನಿಂದ ಪಾರು ಮಾಡಿ ಬೇರೆಯವರನ್ನು ನೇಣಿನಿಂದ ಉಳಿಸಿದ ಕ್ಷೌರಿಕನಿಗೂ ಪಾರಿತೋಷಕ ನೀಡಿ' ಎಂದು ವಜೀರನಿಗೆ ಆಜ್ಞಾಪಿಸಿದ.

ಅರೇಬಿಯಾದ ಕತೆ

**-ಪ.ರಾಮಕೃಷ್ಣ ಶಾಸ್ತ್ರಿ**

# ಹಣ್ಣು



ಹಣ್ಣು ಹಣ್ಣು ಹಣ್ಣು
ತಾಜಾ ತಾಜಾ ಹಣ್ಣು
ಚೆಂದದ ಹಣ್ಣನು ಸವಿದರೆ ಅಣ್ಣ
ಆರೋಗ್ಯವೇ ಬಲು ಚೆನ್ನು

ಹಣ್ಣು ಹಣ್ಣು ಹಣ್ಣು
ದುಂಡನೆ ಸೇಬಿನ ಹಣ್ಣು
ದಿನಕ್ಕೊಂದೊಂದು ತಿನ್ನಲು ನೀನು
ವೈದ್ಯರೇ ಬೇಕಿಲ್ಲ ಚಿನ್ನು

ಹಣ್ಣು ಹಣ್ಣು ಹಣ್ಣು
ರಾಜಾ ಮಾವಿನ ಹಣ್ಣು
ಮನೆ ಮನೆ ತೋಟದಿ ಚೆನ್ನು

ಹಣ್ಣು ಹಣ್ಣು ಹಣ್ಣು
ಬಾಗಿದ ಮೆತ್ತನೆ ಬಾಳೆ ಹಣ್ಣು
ಎಲ್ಲ ಕೆಲಸಕೂ, ದೈವಕೂ ಬೇಕು
ತರತರದ ಬಾಳೆ ಹಣ್ಣು

ಹಣ್ಣು ಹಣ್ಣು ಹಣ್ಣು
ಕಾಡಿನ ಕಿವಿ ಹಣ್ಣು
ಡೆಂಗ್ಯೂಜ್ವರಕೆ ಉತ್ತಮ ಮದ್ದು
ತಿನ್ನು ಜಾಣ ಹಣ್ಣು ನೀನೊಂದು

ಹಣ್ಣು ಹಣ್ಣು ಹಣ್ಣು
ಕೆಂಪನೆ ಪಪ್ಪಾಯಿ ಹಣ್ಣು
ಸುಲಭದಿ ಬೆಳೆವುದು ಎಲ್ಲ ಕಡೆಗೂ
ಬಿಳಿರಕ್ತಕಣಗಳ ವೃದ್ಧಿಪ ಹಣ್ಣು

ಹಣ್ಣು ಹಣ್ಣು ಹಣ್ಣು
ಕಿತ್ತಳೆ, ದಾಳಿಂಬೆ, ಮೋಸಂಬಿ ಹಣ್ಣು
ತಿನ್ನಲು ಲಭ್ಯವು ಸಿ ವಿಟಮಿನ್ನು
ಸವಿಯಿರಿ ಒಂದೊಂದು ಹಣ್ಣು

ಹಣ್ಣು ಹಣ್ಣು ಹಣ್ಣು
ಸಪೋಟ, ಸೀಬೆ, ಚಕ್ಕೋತ ಹಣ್ಣು
ಬಡವರಿರಲಿ ಬಲ್ಲಿದರಾಗಲಿ
ಕೈಗೆಟಕುವ ಬೆಲೆಯ ಹಣ್ಣು

ಹಣ್ಣು ಹಣ್ಣು ಹಣ್ಣು
ಗೊಂಚಲು ದ್ರಾಕ್ಷಿ ಹಣ್ಣು
ಹಸಿರು, ನೀಲಿ, ಕಪ್ಪನೆ ಬಣ್ಣ
ಒಣಗಿಸೆ ಅಡುಗೆಗೂ ರುಚಿಕರ ಹಣ್ಣು

ಹಣ್ಣು ಹಣ್ಣು ಹಣ್ಣು
ಕಲ್ಲಂಗಡಿ , ಹಲಸಿನ ಹಣ್ಣು
ಹಳ್ಳಿಯ ಜನಕೂ, ಪೇಟೆಯ ಜನಕೂ
ಒಳ್ಳೊಳ್ಳೆ ವಿಟಮಿನ್ ನೀಡೋ ಹಣ್ಣು

**-ಚಂದ್ರೇಗೌಡ ನಾರಮ್ನಳ್ಳಿ**